# ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಬೆಂಗಳೂರು ಇವರ ಕಚೇರಿ ಆದೇಶದ ಉದ್ಧರಣ

ಕಚೇರಿ ಆದೇಶ ಸಂಖ್ಯೆ: 105/2015-16 ದಿನಾಂಕ: 11-03-2016

ವಿಷಯ : 2014-15ನೇ ಸಾಲಿನಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಯ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ :
1) ಸರ್ಕಾರದ ಪತ್ರ ಸಂಖ್ಯೆ: ಅಪಜೀ 181 ಅಅಸೇ 2012 ದಿನಾಂಕ : 19-01-2013
2) ಸರ್ಕಾರದ ಪತ್ರ ಸಂಖ್ಯೆ: ಅಪಜೀ 005 ಅಅಸೇ 2014 ದಿನಾಂಕ 07-07-2014.
3) ಈ ಕಚೇರಿ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2014-15 ದಿನಾಂಕ 29-10-2014.
4) ಈ ಕಚೇರಿ ಪ್ರಕಟಣೆ ಸಂಖ್ಯೆ: ಬಿ9-ವಅಅ-ವಿವ-5/2014-15 ದಿನಾಂಕ 20-02-2016.
5) ವೃಂದ ಮತ್ತು ನೇಮಕಾತಿ ನಿಯಮದ ಅಧಿಸೂಚನೆ ಸಂಖ್ಯೆ:ಅಪಜೀ 366 ಅಪಸೇ 2010 ದಿನಾಂಕ: 06-09-2012.
6) ಸರ್ಕಾರದ ಆದೇಶ ಸಂಖ್ಯೆ. ಅಪಜೀ 65 ಅಅಸೇ 2015, ದಿನಾಂಕ : 29-10-2015.
7) ಡೈರೆಕ್ಟರ್ ಫಾರೆಸ್ಟ್ ಎಜುಕೇಶನ್ ಡೆಹರಾಡೂನ್ ಇವರ ಪತ್ರ ಸಂಖ್ಯೆ: 4-600/ಟಿಆರ್‌ಜಿ 11/ ಡಿಎಫ್‌ಟಿ 2014/6995-99 ದಿನಾಂಕ: 23-02-2016 ಹಾಗೂ 4-600/ಟಿಆರ್‌ಜಿ 11/ ಡಿಎಫ್‌ಟಿ 2014/7000-7005 ದಿನಾಂಕ: 23-02-2016.

*****

ಪ್ರಸ್ತಾವನೆ:-

110 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಉಲ್ಲೇಖ (1) & (2)ರ ಪತ್ರಗಳಲ್ಲಿ ಅನುಮತಿ ನೀಡಿರುತ್ತದೆ. ಅದರಂತೆ ಉಲ್ಲೇಖ (3)ರ ಅಧಿಸೂಚನೆಯಲ್ಲಿ 110 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿತ್ತು.

ಕರ್ನಾಟಕ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಲಯ ಅರಣ್ಯಾಧಿಕಾರಿಗಳ ನೇರ ನೇಮಕಾತಿಯ ಎಲ್ಲಾ ಪ್ರಕ್ರಿಯೆಗಳನ್ನು ನಿಯಮಾನುಸಾರ ಪೂರ್ಣಗೊಳಿಸಿ ಉಲ್ಲೇಖ (4)ರ ಪ್ರಕಟಣೆಯ ದಿನಾಂಕ : 20/02/2016 ರಂದು ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಉಲ್ಲೇಖ (7)ರ ಪತ್ರದಲ್ಲಿ ಡೈರೆಕ್ಟರ್ ಫಾರೆಸ್ಟ್ ಎಜುಕೇಶನ್, ಭಾರತ ಸರ್ಕಾರ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಡೆಹರಾಡೂನ್ ಇವರ ಪತ್ರದಲ್ಲಿ ಗುಜರಾತ್ ಫಾರೆಸ್ಟ್ ರೇಂಜರ್ಸ್ ಕಾಲೇಜ್, ರಾಜ್‌ಪೀಪ್ಲ ಇಲ್ಲಿಗೆ 48 ಅಭ್ಯರ್ಥಿಗಳು ಮತ್ತು ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇಲ್ಲಿಗೆ 50 ಅಭ್ಯರ್ಥಿಗಳನ್ನು 18 ತಿಂಗಳ ತರಬೇತಿಗಾಗಿ ನಿಯೋಜಿಸಿ ಹಂಚಿಕೆ ಮಾಡಿರುತ್ತಾರೆ. ಈ ತರಬೇತಿಯು ದಿನಾಂಕ : 20/03/2016ರಿಂದ ಪ್ರಾರಂಭವಾಗುತ್ತದೆ.

110 ವಲಯ ಅರಣ್ಯಾಧಿಕಾರಿ ಹುದ್ದೆಯ ಅಯ್ಕೆಗೆ ಸಂಬಂಧಿಸಿದಂತೆ ಪ್ರಸ್ತುತ 97 ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುತ್ತಾರೆ. ಒಬ್ಬ ಅಭ್ಯರ್ಥಿ ಮೂಲ ದಾಖಲೆಗಳನ್ನು ಸಲ್ಲಿಸಲು ಹಾಜರಾಗಿರುವುದಿಲ್ಲ. ಇನ್ನೊಬ್ಬ ಅಭ್ಯರ್ಥಿಯ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. ಮತ್ತು ಬಿಎಸ್‌ಸಿ ಫಾರೆಸ್ಟ್ರಿ ಹೈದರಾಬಾದ್-ಕರ್ನಾಟಕದ 11 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗಿರುವುದಿಲ್ಲ. ಎಲ್ಲಾ ಮೂಲ ದಾಖಲೆಗಳನ್ನು ಹಾಜರುಪಡಿಸಿದ ಅಭ್ಯರ್ಥಿಗಳ ಪೈಕಿ ಶ್ರೀ.ಬಿ.ಎಸ್.ಸಂಜಯ್ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ.2251/2016ರಲ್ಲಿ ದಾವೆ ಸಲ್ಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ದಿನಾಂಕ : 03-03-2016ರ

ಮಧ್ಯಂತರ ಆದೇಶದಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆ ಹೊಂದಿರುವ ಶ್ರೀ.ಸುರೇಶ್ ಗೌಡ್ರ, 2ಎ ರೂರಲ್ ಇವರ ಆಯ್ಕೆಯನ್ನು ತಡೆ ಹಿಡಿಯಲು ಆದೇಶ ಹೊರಡಿಸಿರುತ್ತದೆ. ಶ್ರೀ.ಸೈಯ್ಯದ್ ಜೊಹ್ಯಾಬುಲ್ಲಾ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ.2273/2016ರಲ್ಲಿ ದಾವೆ ಸಲ್ಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ದಿನಾಂಕ : 10-03-2016ರ ಮಧ್ಯಂತರ ಆದೇಶದಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆ ಹೊಂದಿರುವ ಶ್ರೀ.ಮಹಮದ್ ತಾಹಿರ್, 2 ಬಿ ಸಾಮಾನ್ಯ ಇವರ ಆಯ್ಕೆಯನ್ನು ತಡೆ ಹಿಡಿಯಲು ಆದೇಶ ಹೊರಡಿಸಿರುತ್ತಾರೆ. ಆದುದರಿಂದ ಈ ಇಬ್ಬರು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿರುವುದಿಲ್ಲ.

ಡೈರೆಕ್ಟರ್ ಫಾರೆಸ್ಟ್ ಎಜುಕೇಶನ್, ಭಾರತ ಸರ್ಕಾರ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಡೆಹರಾಡೂನ್ ಇವರ ಉಲ್ಲೇಖ (7)ರ ಪತ್ರದಲ್ಲಿ ಆದೇಶಿಸಿರುವಂತೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ದಿನಾಂಕ: 20-03-2016 ರಿಂದ 18 ತಿಂಗಳ ವೃತ್ತಿ ತರಬೇತಿಗೆ ನಿಯೋಜಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳನ್ನು ವೃತ್ತ ತರಬೇತಿಗೆ ನಿಯೋಜಿಸುವ ಮೊದಲು ವೃಂದ ಮತ್ತು ನೇಮಕಾತಿ ನಿಯಮದಂತೆ ಅಭ್ಯರ್ಥಿಗಳಿಗೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಕಾತಿ ಆದೇಶ ನೀಡಬೇಕಾಗಿರುತ್ತದೆ.

ಈ ರೀತಿ ನೇಮಕಾತಿಯ ಆದೇಶ ನೀಡುವ ಮೊದಲು ಪ್ರತಿ ಅಭ್ಯರ್ಥಿಯ ಶೈಕ್ಷಣಿಕ ವಿದ್ಯಾರ್ಹತೆ ಕುರಿತು ಅಭ್ಯರ್ಥಿ ನೀಡಿರುವ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಪೋಲೀಸ್ ತಪಾಸಣಾ ವರದಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರಗಳ ಕುರಿತು ಸಿಂಧುತ್ವ/ಸತ್ಯಾಪನೆ ಮಾಡಿಸಬೇಕಾಗಿರುತ್ತದೆ. ಪ್ರಸ್ತುತ ಈ ಕ್ರಮ ಕೈಗೊಳ್ಳಲು ಸಮಯದ ಅಭಾವ ಇರುತ್ತದೆ.

ಈ ಎಲ್ಲಾ ಅಭ್ಯರ್ಥಿಗಳು 18 ತಿಂಗಳ ವೃತ್ತಿ ತರಬೇತಿಗೆ ಹಾಜರಾಗುವುದನ್ನು ಪರಿಗಣನೆಗೆ ತೆಗೆದುಕೊಂಡು ಎಲ್ಲಾ ಅಭ್ಯರ್ಥಿಗಳ ಪದವಿ ಪ್ರಮಾಣ/ಅಂಕ ಪಟ್ಟಿಯ ಸತ್ಯಾಪನೆ, ಜಾತಿ ಪ್ರಮಾಣ ಪತ್ರದ ಸತ್ಯಾಪನೆ, ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿಲ್ಲದೆ ಇರುವ ಬಗ್ಗೆ ಅಪರಾಧೀಕರಣ ತನಿಖೆಗೆ ಒಳಪಡದೆ ಇರುವ ಬಗ್ಗೆ ಪೋಲೀಸ್ ಇಲಾಖೆಯಿಂದ ನೀಡುವ ಸತ್ಯಾಪನೆ, ಕನ್ನಡ, ಗ್ರಾಮೀಣ ಹಾಗೂ ಮಾಜಿ ಸೈನಿಕ ಪ್ರಮಾಣ ಪತ್ರದ ಸತ್ಯಾಪನೆಗೆ ಒಳಪಡುವ ಬಗ್ಗೆ ರೂ. 100 ಛಾಪಾ ಕಾಗದಲ್ಲಿ ಕರಾರು ಪತ್ರವನ್ನು ಪ್ರತಿ ಅಭ್ಯರ್ಥಿಯಿಂದ ಪಡೆಯಲಾಗಿರುತ್ತದೆ. ಹಾಗೂ ಈ ಕರಾರನ್ನು ನೋಟರಿ ಮೂಲಕ ಪ್ರಮಾಣಿಕರಿಸಲಾಗಿರುತ್ತದೆ.

ಸದರಿ ಕರಾರು ಪತ್ರದಲ್ಲಿ ಒಂದು ವೇಳೆ ಮೇಲೆ ತಿಳಿಸಿರುವ ಯಾವುದೇ ಪ್ರಮಾಣ ಪತ್ರದ ಸತ್ಯಾಪನೆಯಲ್ಲಿ ಅಭ್ಯರ್ಥಿಯ ವಿರುದ್ಧ ಪ್ರತಿಕೂಲ ಷರಾ ಇದ್ದಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಯ ಸೇವೆಯಿಂದ ಯಾವುದೇ ಮುನ್ಸೂಚನೆ ಇಲ್ಲದೆ ವಜಾಗೊಳಿಸಲಾಗುವುದು. ಸದರಿ ಅಭ್ಯರ್ಥಿಯನ್ನು ಮುಂದೆ ಯಾವುದೇ ಸರ್ಕಾರಿ ನೌಕರಿಗೆ ಸೇರದಂತೆ ನಿಷೇಧಿಸಲಾಗುವುದು. ಕ್ರಿಮಿನಲ್ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗುವುದು. ಹಾಗೂ ತರಬೇತಿಗೆ ಕರ್ನಾಟಕ ಅರಣ್ಯ ಇಲಾಖೆಯಿಂದ ಭರಿಸಲಾದ ಪೂರ್ಣ ವೆಚ್ಚವನ್ನು ಹಿಂಪಾವತಿಸಲು ಬದ್ಧರಾಗಿರುವ ಬಗ್ಗೆ ಅಭ್ಯರ್ಥಿಯಿಂದ ಹಾಗೂ ಇಬ್ಬರು ಸರ್ಕಾರಿ ಹುದ್ದೆಯಲ್ಲಿರುವ ನೌಕರರಿಂದ ಒಪ್ಪಿಗೆಯನ್ನು ಪಡೆಯಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು ಇದಲ್ಲದೆ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಉಪ ನಿಯಮ 20 ರಂತೆ ಅಪರಾಧಿ ವ್ಯವಹರಣೆಗೆ ಒಳಪಡಿಸಲಾಗುವುದು.

ಉಲ್ಲೇಖ (5) ರಲ್ಲಿ ಹೇಳಿದ ಕರ್ನಾಟಕ ಅರಣ್ಯ ಇಲಾಖೆ ವೃಂದ ಮತ್ತು ನೇಮಕಾತಿ ನಿಯಾಮಾವಳಿಯ ನಿಯಮಗಳಂತೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ವಲಯ ಅರಣ್ಯಾಧಿಕಾರಿಗಳಿಗೆ ಮೂರು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇಲೆ ನೇಮಕ ಮಾಡಿ ಈ ಪರೀಕ್ಷಾರ್ಥ ಅವಧಿಯಲ್ಲಿ 1½ ವರ್ಷದ ವೃತ್ತಿ ತರಬೇತಿಯನ್ನು ಮತ್ತು 6 ತಿಂಗಳ ವೃತ್ತಿ ತರಬೇತಿಯನ್ನು ಇಲಾಖಾ ವತಿಯಿಂದ ಪಡೆಯಬೇಕಾಗಿರುತ್ತದೆ. ಈ ವಲಯ ಅರಣ್ಯಾಧಿಕಾರಿಗಳು ಒಂದು ವರ್ಷದ ಕಾಲ ಸ್ವತಂತ್ರವಾಗಿ ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

ಉಲ್ಲೇಖ (6)ರ ಸರ್ಕಾರದ ಆದೇಶದಲ್ಲಿ ಸರ್ಕಾರವು ನೇರ ನೇಮಕಾತಿಯಿಂದ ಆಯ್ಕೆಗೊಂಡ ನಂತರ, ತರಬೇತಿಗಾಗಿ ನಿಯೋಜಿಸುವ ಅವಧಿಗೆ ವೇತನ, ಭತ್ಯೆ ಇತ್ಯಾದಿಗಳನ್ನು ಪಾವತಿಸುವ ಸಲುವಾಗಿ 110 ವಲಯ ಅರಣ್ಯಾಧಿಕಾರಿಗಳ ಹುದ್ದೆಯನ್ನು ಸಂಖ್ಯಾತಿರಿಕ್ತ ಹುದ್ದೆಯನ್ನಾಗಿ ಒಟ್ಟು 24 ತಿಂಗಳ ತರಬೇತಿ ಅವಧಿಗೆ ಸೃಜಿಸಿ ಆದೇಶಿಸಿರುತ್ತಾರೆ. ಈ 110 ಸಂಖ್ಯಾತಿರಿಕ್ತ ಹುದ್ದೆಗಳ ಪೈಕಿ 95 ಹುದ್ದೆಗಳನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಟ್ಟಿ, ಧಾರವಾಡ ಇವರಿಗೆ ಮರು ಹಂಚಿಕೆ ಮಾಡಲಾಗಿದೆ. ಈ ಮೇಲ್ಕಂಡ ಹಿನ್ನೆಲೆಯಲ್ಲಿ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ 95 ಅಭ್ಯರ್ಥಿಗಳನ್ನು ವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ನೇಮಿಸುವ ಬಗ್ಗೆ ಈ ಕೆಳಕಂಡ ಆದೇಶ.

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡ ಹಾಗೂ ಎಲ್ಲಾ ಪೂರಕ ದಾಖಲೆಗಳು ಲಭ್ಯವಾದ ಈ ಕೆಳಕಂಡ ಅಭ್ಯರ್ಥಿಗಳನ್ನು ಮೂರು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇಲೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಿಸಿ, ವೇತನ ಶ್ರೇಣಿ ರೂ.21600-600-24600-700-28800-800-33600-900-39000-1050-40050ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿ ನೇಮಕ ಮಾಡಿದೆ. ಈ ಆದೇಶವು ಈ ತಕ್ಷಣದಿಂದ ಜಾರಿಗೆ ಬರುತ್ತದೆ.

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 1 | ವಿಜಯ್ ಮೂಡಬಾಗಿಲು | 06-06-1992 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ. |
| 2 | ಎಂ.ಬಸವರಾಜು | 11-09-1992 | -ಅದೇ- |
| 3 | ಹೆಚ್.ವಿ.ಪ್ರಶಾಂತ್ | 14-05-1991 | -ಅದೇ- |
| 4 | ಲಿಂಗಾರೆಡ್ಡಿ ಆರ್.ಮಂಕನಿ | 20-05-1991 | -ಅದೇ- |
| 5 | ಹರಿಕಿರಣ್ ವೆಂಕಟರಾಮನ್ ಭಟ್ | 22-02-1992 | -ಅದೇ- |
| 6 | ಮಂಜುನಾಥ್ ಮಹಾಬಲೇಶ್ವರ ಹೆಬ್ಬಾರ್ | 30-08-1989 | -ಅದೇ- |
| 7 | ಜವಾದ್‌ಬಾಷಾ ಅಂಗಡಿ | 20-03-1991 | -ಅದೇ- |
| 8 | ಅಭಿಷೇಕ್ ಸಿ.ನಾಯ್ಕ | 10-07-1992 | -ಅದೇ- |
| 9 | ಎಸ್.ಅನಿಲ್ ಕುಮಾರ್ | 15-07-1992 | -ಅದೇ- |
| 10 | ಮಹಮದ್ ಫಯಾಜುದ್ದೀನ್ | 05-12-1990 | -ಅದೇ- |
| 11 | ಗಜಾನನ್ ಶಿವಾನಂದ ನಾಯ್ಕ್ | 19-05-1991 | -ಅದೇ- |
| 12 | ಯೇಷ್ಮ ಮಾಚಮ್ಮ | 06-04-1991 | -ಅದೇ- |
| 13 | ಹೆಚ್.ಕೆ.ಅಮಿತ್ | 04-03-1990 | -ಅದೇ- |
| 14 | ಎನ್.ನಾಗಾರ್ಜುನ್ | 01-08-1991 | -ಅದೇ- |
| 15 | ಬಿ.ಅರುಣ್ ಕುಮಾರ್ ಅಷ್ಟಗಿ | 30-10-1991 | -ಅದೇ- |
| 16 | ಗುರುರಾಜ್ ಬಿ.ಸಂಕೇಶ್ವರ್ | 11-09-1985 | -ಅದೇ- |
| 17 | ಕೆ.ಎಲ್.ಮಧು | 10-11-1992 | -ಅದೇ- |

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 18 | ಬಿ.ಎಂ.ಶೃತಿ | 14-06-1993 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಢ. |
| 19 | ಕಿರಣ್ ಆರ್.ಮನವಾಚಾರಿ | 29-07-1991 | -ಅದೇ- |
| 20 | ಎನ್.ಸಿ.ಮಹಾದೇವ | 10-05-1993 | -ಅದೇ- |
| 21 | ಎಲ್.ಪರಶುರಾಮ | 16-03-1990 | -ಅದೇ- |
| 22 | ಅನುಷ ಭಟ್ ನೆತ್ತರಕೆರೆ | 27-03-1991 | -ಅದೇ- |
| 23 | ಶಿವರಾಜ್ ಮಠದ | 09-01-1991 | -ಅದೇ- |
| 24 | ರಾಮಪ್ಪ ಪೂಜಾರ್ | 01-08-1991 | -ಅದೇ- |
| 25 | ಎಂ.ಉಷಾ | 05-03-1993 | -ಅದೇ- |
| 26 | ಡಿ.ರಾಜಿಕ್ ಸಾಬ್ ನದಾಫ್ | 12-02-1991 | -ಅದೇ- |
| 27 | ಶಿವಾನಂದ ನಿಂಗಾಣಿ | 20-05-1989 | -ಅದೇ- |
| 28 | ಎ.ಉಮಾ | 12-01-1991 | -ಅದೇ- |
| 29 | ಕೆ.ಸಿ.ಜ್ಯೋತಿ | 28-08-1993 | -ಅದೇ- |
| 30 | ಸಚಿನ್ ಪಾಟೀಲ್ | 24-02-1992 | -ಅದೇ- |
| 31 | ಶಗುಫ್ತಾ ಎ.ಶೇಖ್ | 24-05-1992 | -ಅದೇ- |
| 32 | ಗಣೇಶಪ್ಪ ಶೇತ್ರ | 03-02-1990 | -ಅದೇ- |
| 33 | ಆರ್.ದಿವ್ಯಾ | 06-07-1992 | -ಅದೇ- |
| 34 | ಆರ್.ವಸಂತಕುಮಾರ್ | 28-03-1986 | -ಅದೇ- |
| 35 | ಕೆ.ರಾಜ್ ಕುಮಾರ್ | 08-10-1991 | -ಅದೇ- |
| 36 | ಸಂತೋಷ್ ಮನೋಹರ್ ಹೂಗಾರ್ | 30-07-1992 | -ಅದೇ- |
| 37 | ಎಸ್.ಸಂಪತ್ ಪಟೇಲ್ | 19-05-1993 | -ಅದೇ- |
| 38 | ಕಿರಣ್ ಕುಮಾರ್ ಜಿ.ಕರಟಂಗಿ | 01-02-1989 | -ಅದೇ- |
| 39 | ಪ್ರೀತಿ ರಾಮ್‌ದಾಸ್ ನಾಯ್ಕ್ | 23-05-1991 | -ಅದೇ- |
| 40 | ಎಸ್.ಡಿ.ರಾಜೇಶ್ | 09-10-1991 | -ಅದೇ- |
| 41 | ಭವ್ಯ ನಾಯ್ಕ್ | 02-02-1992 | -ಅದೇ- |
| 42 | ಆರ್.ತೋಷಣ್ ಕುಮಾರ್ | 17-04-1991 | -ಅದೇ- |
| 43 | ಸ್ನೇಹ ಕೊಪ್ಪಳ್ | 09-09-1992 | -ಅದೇ- |
| 44 | ಹೆಚ್.ಎಂ.ಮಂಜುನಾಥ | 22-03-1992 | -ಅದೇ- |
| 45 | ಎಸ್.ಹನುಮಂತರಾಜು | 12-04-1984 | -ಅದೇ- |

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 46 | ಜೆ.ಆರ್.ವಿನಯ್ | 03-03-1992 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ. |
| 47 | ಎಸ್.ನಮಿತ | 04-09-1992 | -ಅದೇ- |
| 48 | ಪಿ.ಪ್ರಫುಲ್ ಶೆಟ್ಟಿ | 30-12-1990 | -ಅದೇ- |
| 49 | ಆಸಿಫ್ ಅಹಮದ್ | 19-05-1989 | -ಅದೇ- |
| 50 | ಎಸ್.ಮೋಹನ್ | 22-12-1986 | -ಅದೇ- |
| 51 | ಬಿ.ಸುಧಾಕರ | 01-04-1993 | -ಅದೇ- |
| 52 | ಎಲ್.ಸ್ವಾತಿ | 05-06-1992 | -ಅದೇ- |
| 53 | ಎಂ.ಆರ್.ಧನ್ಯಶ್ರೀ | 28-11-1990 | -ಅದೇ- |
| 54 | ಭಾಗ್ಯಶ್ರೀ ಮಸಲಿ | 21-07-1992 | -ಅದೇ- |
| 55 | ವಿನಯ್ ಕುಮಾರ್ | 29-12-1992 | -ಅದೇ- |
| 56 | ಪಿ.ಸಿ.ದಿಲೀಪ್ ಕುಮಾರ್ | 20-07-1991 | -ಅದೇ- |
| 57 | ಮಾಧವ ದೊಡ್ಡಬುಡಗಿ | 09-06-1988 | -ಅದೇ- |
| 58 | ರಾಜು ಗೊಂಡಾಕರ್ | 12-07-1990 | -ಅದೇ- |
| 59 | ನಯನ ಸಮಂತ್ರಿ | 30-08-1992 | -ಅದೇ- |
| 60 | ಬಿ.ಅಶೋಕ ನಾಯ್ಕ್ | 28-05-1991 | -ಅದೇ- |
| 61 | ಉಷಾ ರಾಜು ಕಬ್ಬೇರ್ | 11-12-1990 | -ಅದೇ- |
| 62 | ಮಹಾಂತೇಶ್ | 01-06-1990 | -ಅದೇ- |
| 63 | ವಿನಾಯ್ಕ ರುದ್ರಗೌಡ ಕೋರಿ | 08-08-1985 | -ಅದೇ- |
| 64 | ಸೈಯ್ಯದ್ ಮುರ್ತಾಜಾ ಖಾದ್ರಿ | 29-08-1986 | -ಅದೇ- |
| 65 | ವಿನಿತ ಜಿ.ಚವಾಣ್ | 17-03-1991 | -ಅದೇ- |
| 66 | ಎ.ರಬಿಯ ಪರ್ವೀನ್ | 08-05-1992 | -ಅದೇ- |
| 67 | ಶಿವರಾಜ್ ಮೇಟಿ | 06-01-1993 | -ಅದೇ- |
| 68 | ಅಪ್ಪಾರಾವ್ ಕಾಳಶೆಟ್ಟಿ | 05-01-1985 | -ಅದೇ- |
| 69 | ಐಶ್ವರ್ಯ ಗೊಬ್ಬೂರ | 15-10-1992 | -ಅದೇ- |
| 70 | ಎಸ್.ಜೆ.ಹರ್ಷವರ್ಧನ | 12-04-1989 | -ಅದೇ- |
| 71 | ಹೆಚ್.ಶಿವಕುಮಾರ | 15-08-1988 | -ಅದೇ- |
| 72 | ಉಮೇಶ್ ಪ್ರಧಾನಿ | 16-11-1983 | -ಅದೇ- |
| 73 | ಕೆ.ಆರ್.ತ್ರಿನೇತ್ರ | 20-01-1990 | -ಅದೇ- |

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 74 | ಪ್ರಭುಲಿಂಗ್ | 14-07-1986 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ. |
| 75 | ಟಿ.ನಾಗವೇಣಿ | 01-06-1991 | -ಅದೇ- |
| 76 | ಸಂತೋಷ್ ಸೂರಿಮಠ್ | 22-05-1987 | -ಅದೇ- |
| 77 | ಗಿರೀಶ್ ಎಸ್.ಇಟಗಿ | 01-06-1990 | -ಅದೇ- |
| 78 | ಆರ್.ಶ್ರೀಲಕ್ಷ್ಮಿ | 12-05-1989 | -ಅದೇ- |
| 79 | ಡಿ.ಸಿ.ಶೃತಿ | 05-07-1989 | -ಅದೇ- |
| 80 | ಪವನ್ ಕುರನಿಂಗ | 03-10-1991 | -ಅದೇ- |
| 81 | ಎಂ.ಪಿ.ಆದರ್ಶ | 10-11-1986 | -ಅದೇ- |
| 82 | ಪ್ರಶಾಂತ್ ಮಂಗಸುಳಿ | 23-07-1988 | -ಅದೇ- |
| 83 | ರಾಜೇಶ್ ಬಳಿಗಾರ್ | 08-07-1991 | -ಅದೇ- |
| 84 | ಸುನಿಲ್ ಕುಮಾರ್ ಗೌಡ | 01-06-1987 | -ಅದೇ- |
| 85 | ರಾಘವೇಂದ್ರ ಮಲ್ಲಪ್ಪನವರ್ | 08-12-1988 | -ಅದೇ- |
| 86 | ಟಿ.ವೈ.ಅಕ್ಷತ | 12-11-1988 | -ಅದೇ- |
| 87 | ವೈ.ಎಂ.ಶ್ವೇತ | 23-02-1991 | -ಅದೇ- |
| 88 | ಎನ್.ಪದ್ಮಶ್ರೀ | 24-11-1989 | -ಅದೇ- |
| 89 | ಎಂ.ಲಕ್ಷ್ಮಣ್ | 11-11-1991 | -ಅದೇ- |
| 90 | ಕರೆಪ್ಪ | 31-07-1990 | -ಅದೇ- |
| 91 | ಎಸ್.ರಾಜೇಶ್ ನಾಯ್ಕ | 26-06-1988 | -ಅದೇ- |
| 92 | ಕೆ.ಆರ್.ಪ್ರಸನ್ನ ಕುಮಾರ್ | 29-03-1983 | -ಅದೇ- |
| 93 | ವೀರೇಶ್ | 05-06-1986 | -ಅದೇ- |
| 94 | ಡಿ.ಪುಷ್ಪಾವತಿ | 10-06-1992 | -ಅದೇ- |
| 95 | ಸುರೇಶ್ ದೊಡ್ಡಬಸಣ್ಣವರ್ | 18-03-1975 | -ಅದೇ- |

**ಸೂಚನೆ/ಷರತ್ತುಗಳು:-**

1. ಮೇಲೆ ಹೇಳಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಅವರಿಗೆ ನೇಮಿಸಿದ ಹುದ್ದೆಗಳಲ್ಲಿ ದಿನಾಂಕ : 14/03/2016ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇವರ ಸಮ್ಮುಖ ಕರ್ತವ್ಯಕ್ಕೆ ಹಾಜರಾಗುವುದು.

2. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ-ಎಸ್‌ಪಿಎಲ್-04-ಪಿಇಟಿ-2005 ದಿನಾಂಕ 31-3-2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory Pension Scheme) ಗೆ ಈ ನೇಮಕಾತಿಯಲ್ಲಿ ಆಯ್ಕೆಯಾದ ವಲಯ ಅರಣ್ಯಾಧಿಕಾರಿಗಳು ಬದ್ಧರಾಗಿರತಕ್ಕದ್ದು.

3. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಸೇವಾ ವಹಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಢ ಇವರು ಕೂಡಲೇ ತೆರೆದು ಕಾಲಕಾಲಕ್ಕೆ ಅವರ ಸೇವಾ ವಿವರಗಳನ್ನು ಹಾಗೂ ತರಬೇತಿ ವಿವರಗಳನ್ನು ದಾಖಲಿಸುವುದು.

4. ಹದಿನೆಂಟು ತಿಂಗಳ ವೃತ್ತಿ ತರಬೇತಿ ಮುಗಿದ ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಢ ಇವರು ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ವೃತ್ತಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಅಸೆಸ್‌ಮೆಂಟ್ ರಿಪೋರ್ಟನ್ನು ನಿಗದಿತ ನಮೂನೆಯಲ್ಲಿ ಬರೆದು ಈ ಕಚೇರಿಗೆ ಸಲ್ಲಿಸುವುದು.

5. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಪ್ರಸ್ತುತ ನೇಮಿಸಿದ ಹುದ್ದೆಗಳಲ್ಲಿ lein ಉಳಿಸಿಕೊಂಡು ವೃತ್ತಿ ತರಬೇತಿಯ ಅವಧಿಯಲ್ಲಿ ಅವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳನ್ನು ಮೂಲ ಹುದ್ದೆಯಿಂದಲೇ ಪಾವತಿಸತಕ್ಕದ್ದು.

6. ವೃತ್ತಿ ತರಬೇತಿ ಅವಧಿ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಸೇವೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಕರ್ನಾಟಕ ಅರಣ್ಯ ಸೇವೆಗಳು (ನೇಮಕಾತಿ) ನಿಯಮಗಳು 2003 ಹಾಗೂ ಪರೀಕ್ಷಾರ್ಥ ನಿಯಮಗಳ ಪ್ರಕಾರ ಅವರನ್ನು ನಿಯಾಮಾನುಸಾರ ಸೇವೆಯಿಂದ ತೆಗೆದುಹಾಕಲಾಗುವುದು.

7. ಪರೀಕ್ಷಾರ್ಥ ವಲಯ ಅರಣ್ಯ ಅಧಿಕಾರಿಗಳು ವಲಯ ಅರಣ್ಯ ಅಧಿಕಾರಿ ಹುದ್ದೆಗೆ ನಿಗದಿಪಡಿಸಲಾದ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಪರೀಕ್ಷಾರ್ಥ ಅವಧಿಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಕರ್ನಾಟಕ ನಾಗರೀಕ ಸೇವ ನಿಯಮಾವಳಿ 1974ರ (ಸರ್ವೀಸ್ & ಕನ್ನಡ ಭಾಷಾ ಪರೀಕ್ಷೆ) ನಿಯಮ (2) (ಎ) (i)ರನ್ವಯ ಕನ್ನಡ ಭಾಷಾ ಪರೀಕ್ಷೆಯನ್ನು ಕರ್ತವ್ಯಕ್ಕೆ ಹಾಜರಾದ ಎರಡು ವರ್ಷಗಳ ಅವಧಿಯಲ್ಲಿ ತೇರ್ಗಡೆ ಹೊಂದಬೇಕಾಗಿದ್ದು, ಈ ಕೆಳಕಂಡ ಅಭ್ಯರ್ಥಿಗಳು ಈ ನಿಯಮಗಳಲ್ಲಿ ಸೂಚಿಸಿದ ಪರೀಕ್ಷೆಯನ್ನು ತೇರ್ಗಡೆ ಹೊಂದಿದ ನಂತರ ಪರೀಕ್ಷಾರ್ಥ ಅವಧಿಯನ್ನು ಘೋಷಿಸಲಾಗುವುದು.

| | | | |
|---|---|---|---|
| 1 | ಅಪ್ಪಾರಾವ್ ಕಾಳಶೆಟ್ಟಿ | 5 | ಹರಿಕಿರಣ್ ವೆಂಕಟ್‌ರಾಮನ್ ಭಟ್ |
| 2 | ಎ.ರಖೀಯ ಪರ್ವೀನ್ | 6 | ಡಿ.ರಜೀಕ್ ಸಾಬ್ ನದಾಫ್ |
| 3 | ಎನ್.ಪದ್ಮಶ್ರೀ | 7 | ಯೇಷ್ಮ ಮಾಚಮ್ಮ |
| 4 | ಎಲ್.ಸ್ವಾತಿ | 8 | ಗುರುರಾಜ್ ಬಿ.ಸಂಕೇಶ್ವರ್ |

8. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಕಡ್ಡಾಯವಾಗಿ 5 ವರ್ಷಗಳ ಸೇವೆಯನ್ನು ಅರಣ್ಯ ಇಲಾಖೆಯಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ 5 ವರ್ಷದ ಮೊದಲೇ ಹುದ್ದೆಯನ್ನು ತ್ಯಜಿಸಿದಲ್ಲಿ ಅಥವಾ ಯಾವುದೇ ಕಾರಣಕ್ಕೆ ಅವರನ್ನು ಹುದ್ದೆಯಿಂದ ತೆಗೆದು ಹಾಕಿದಲ್ಲಿ ಪರೀಕ್ಷಾರ್ಥ ವಲಯ ಅರಣ್ಯ ಅಧಿಕಾರಿಗಳು ತರಬೇತಿ ಪೂರ್ವ ಇಲಾಖೆಗೆ ಸಲ್ಲಿಸಿರುವ ನಷ್ಟಬಂಧಿ ಪತ್ರದಲ್ಲಿನ ಷರತ್ತಿನ ಪ್ರಕಾರ (Indemnity Bond) ಇವರಿಗೆ ವಲಯ ಅರಣ್ಯಾಧಿಕಾರಿ ಹುದ್ದೆಯ ತರಬೇತಿ ನೀಡಲು ಸರ್ಕಾರವು ವೆಚ್ಚ ಮಾಡಿದ ಹಣವನ್ನು ಬಡ್ಡಿ ಸಹಿತ ಅವರಿಂದ ವಸೂಲು ಮಾಡಲಾಗುವುದು.

9. ತರಬೇತಿಯ ಅವಧಿಯಲ್ಲಿ ಸರ್ಕಾರವು ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ರೂ.50,000-00 ಗಳನ್ನು ಸಾಧನ ಸಾಮಗ್ರಿ ವೆಚ್ಚಗಳಿಗಾಗಿ ನೀಡಿದ್ದು, ಸದರಿ ಹಣದಲ್ಲಿ ಶೇಕಡಾ 50 ರಷ್ಟು ಹಣವನ್ನು ಅಂದರೆ ರೂ. 25,000-00 ಗಳನ್ನು ಅವರು ಹಿಂದಿರುಗಿಸಬೇಕಾಗಿರುತ್ತದೆ. ಅದುದರಿಂದ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿ (ಡಿ.ಡಿ.ಓ.) ಮೇಲಿನ ಮೊತ್ತವನ್ನು 10 ಕಂತುಗಳಲ್ಲಿ ತಿಂಗಳಿಗೆ ರೂ. 2,500-00 ರಂತೆ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಮೊದಲನೇ ತಿಂಗಳ ವೇತನದಿಂದಲೇ ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು ಹಾಗೂ ಈ ಕಚೇರಿಗೆ ಮಾಹಿತಿ ನೀಡುವುದು.

10. ಈ ಆದೇಶದಲ್ಲಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ನೀಡಿರುವ ಕ್ರಮಾಂಕವು ವಲಯ ಅರಣ್ಯ ಅಧಿಕಾರಿ ವೃಂದದ ಜೇಷ್ಠತಾ ಕ್ರಮಾಂಕದ ನಿಗದಿಗೆ ಅನ್ವಯವಾಗುವುದಿಲ್ಲ. ವಲಯ ಅರಣ್ಯಾಧಿಕಾರಿ ವೃಂದದಲ್ಲಿ ಜೇಷ್ಠತಾ ಕ್ರಮಾಂಕವನ್ನು ನಿಯಾಮಾನುಸಾರ ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು.

11. ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮ 20 ರ ಪ್ರಕಾರ ನೇರ ನೇಮಕಾತಿಯಿಂದ ಆಯ್ಕೆಯಾಗುವ ವಲಯ ಅರಣ್ಯಾಧಿಕಾರಿಗಳಿಂದ ಒಂದು ವರ್ಷದ ವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡಬೇಕಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ವೇತನ ಬಟವಡೆ ಅಧಿಕಾರಿ (ಡಿ.ಡಿ.ಓ) ಮೇಲಿನ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಂದ ಈ ಕೆಳಕಂಡಂತೆ ಒಂದು ವರ್ಷದ ಮೂಲವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡುವುದು.

ಅ. ಒಂದು ವರ್ಷ ಮೂಲವೇತನದ ಶೇ. 25ರ ಭಾಗದಲ್ಲಿ ಶೇಕಡಾ 6¼ ಭಾಗವನ್ನು ಮೊದಲ ತಿಂಗಳ ವೇತನದಲ್ಲಿ ನಗದಾಗಿ ವಸೂಲು ಮಾಡಿ ಭದ್ರತಾ ಠೇವಣಿಯನ್ನಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಎಂಬ ಪದನಾಮದಲ್ಲಿ ಇಡುವುದು.

ಆ. ಉಳಿದ ಶೇಕಡಾ 18¾ ಭಾಗವನ್ನು ಮೂಲವೇತನದ ಶೇಕಡಾ 10 ರಷ್ಟು ಮೊತ್ತವನ್ನು ಪ್ರತಿ ತಿಂಗಳ ವೇತನದಲ್ಲಿ ಕಡಿತಗೊಳಿಸಿ ವಸೂಲಿ ಮಾಡುವುದು. ಹೀಗೆ ಮಾಡುವುದರಿಂದ ಒಟ್ಟು ಒಂದು ವರ್ಷ ಮೂಲವೇತನದ ಶೇಕಡಾ 25 ರಷ್ಟು ಭಾಗವನ್ನು ವಸೂಲಿ ಮಾಡಿದಂತಾಗುವುದು.

ಇ. ಉಳಿದ ಶೇಕಡಾ 75 ರಷ್ಟು ಭಾಗವನ್ನು ನೌಕರರ ಇಚ್ಛಾನುಸಾರ ನಗದಾಗಿ ಇಲ್ಲವೇ ಕರ್ನಾಟಕ ಆರ್ಥಿಕ ಸಂಹಿತೆ 1958 ರ ನಿಯಮ 353 ರಿಂದ 359 ರಲ್ಲಿ ತಿಳಿಸಿರುವ ಪ್ರಕಾರ ವಸೂಲಿ ಮಾಡುವುದು.

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ)**
**ಹಾಗೂ ನೇಮಕಾತಿ ಪ್ರಾಧಿಕಾರ.**

**ಸಂಖ್ಯೆ : ಬಿ9–ವಅಅ–ವಿವ–5/2014–15**

ಸಂಬಂಧಿಸಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಸಲ್ಲಿಸಿದೆ:–

1. ಸರ್ಕಾರದ ಅಪರ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ವನ್ಯಜೀವಿ) ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ, ಕಾರ್ಯಯೋಜನೆ ಮತ್ತು ತರಬೇತಿ, ಬೆಂಗಳೂರು.
4. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಢ.
6. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
8. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
9. ಕಚೇರಿ ಆದೇಶದ ಕಡತಕ್ಕೆ.
10. ಈ ಕಚೇರಿಯ ಬಿ1 ಶಾಖೆಗೆ.
11. ಬಿಡಿ ಪ್ರತಿ